# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 216 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 01.03.2025 • ಶನಿವಾರ • ಪುಟ:04 • ಬೆಲೆ:2

Volume:02 • Issue: 216 • PRGI No:KARKAN/2023/88055 • VIJAYANAGARA • 01.03.2025 • Saturday • Page:04 • Rs:2



ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+
Digital E-PAPER READERS



No.1 HAMPI TIMES LEADING PRINT & DIGITAL District News Paper

Contact for Advertisements: 9448633038

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!

HAMPI TIMES VIJAYANAGARA

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ

1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು

94486 33038 hampitimes@gmail.com

ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...

ಹಂಪಿ ಟೈಮ್ಸ್ ಇ-ಪೇಪರ್

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


# ಕ್ಷಣಕಾಲ ಗತಕಾಲಕ್ಕೆ ಕರೆದೊಯ್ದ ನಟ ರಮೇಶ







## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ




## ವಿಚಾರ ಸಂಕಿರಣ

**ಹಂಪಿ ಟೈಮ್ಸ್ ಹೊಸಪೇಟೆ:** ಹಂಪಿ ಉತ್ಸವ 2025 ನಿಮಿತ್ತ ಮಾ.1 ಮತ್ತು 2 ರಂದು ಪುರಾತತ್ವ ಸಂಗ್ರಾಹಲಯಗಳು ಮತ್ತು ಪರಂಪರೆ ಇಲಾಖೆ ಕಚೇರಿ ಆವರಣದಲ್ಲಿ ಬೆ.10:30 ಕ್ಕೆ ವಿಜಯನಗರ ಅಧ್ಯಯನ ಕುರಿತು 27 ನೇ ವಾರ್ಷಿಕ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪುರಾತತ್ವ ನಿರ್ದೇಶಕ ಡಾ.ಆರ್.ಶೇಜೇಶ್ವರ ತಿಳಿಸಿದ್ದಾರೆ.

## ಹಂಪಿ ಉತ್ಸವ ವಿಜೃಂಭಣೆ ಬರುವ ವರ್ಷವು ಮತ್ತಷ್ಟು ಅದ್ಧೂರಿ

### ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿಕೆ

■ ಹಂಪಿ ಟೈಮ್ಸ್ ಹೊಸಪೇಟೆ

ಹಂಪಿ ಉತ್ಸವ ವಿಜೃಂಭಣೆಯಿಂದ ಆಚರಿಸಲಾಗಿದೆ. ಬರುವ ವರ್ಷವು ಈ ಉತ್ಸವ ಇನ್ನೂ ಹೆಚ್ಚಿನ ರೀತಿಯಲ್ಲಿ ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದರು.

ಅವರು ಶುಕ್ರವಾರ ಎಂ. ಪಿ. ಪ್ರಕಾಶ್ ವೇದಿಕೆಯಲ್ಲಿ ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ. ಪ್ರವಾಸೋದ್ಯಮ ಇಲಾಖೆ ಹಾಗೂ ಜಿಲ್ಲಾಡಳಿತ ವಿಜಯನಗರ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಹಂಪಿ ಉತ್ಸವ– 2025 ಸಮಾರಂಭದಲ್ಲಿ ಡೊಳ್ಳು ಭಾರಿಸುವ ಮೂಲಕ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಹಂಪಿ ಉತ್ಸವ ನಾಡ ಹಬ್ಬ ಇದ್ದಂತೆ, ಇದನ್ನು ಅಚ್ಚು ಕಟ್ಟಾಗಿ ಮಾಡುವ ಸಂಬಂಧ ಕಳೆದ 4 ರಿಂದ 5 ದಿನಗಳಿಂದ ಇಲ್ಲಿ ಇದ್ದೇನೆ. ಎಲ್ಲಾ ಕಡೆ ಮನೆ– ಮನೆಗಳಲ್ಲಿ ಹಂಪಿ ಉತ್ಸವವನ್ನು ಜನರು ಆಚರಿಸುತ್ತಿದ್ದಾರೆ. ಇದನ್ನು 1987 ಇಸ್ವಿಯಲ್ಲಿ ಎಂ. ಪಿ. ಪ್ರಕಾಶ ಅವರು ಇದಕ್ಕೆ ವಿಶೇಷ ರೀತಿಯಲ್ಲಿ ಚಾಲನೆ ನೀಡಿದರು. ಭಗವಂತನ ಆಶೀರ್ವಾದ ಇದ್ದರೆ ಮುಂದಿನ ವರ್ಷ ಇದನ್ನು ಇನ್ನೂ ಚೆನ್ನಾಗಿ ಆಚರಣೆ ಮಾಡಲಾಗುವುದು ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ್ ತಂಗಡಗಿ ಮಾತನಾಡಿ, ವಿಜೃಂಭಣೆಯ ಹಂಪಿ ಉತ್ಸವದ ರೂವರಿ ಎಂ.ಪಿ.ಪ್ರಕಾಶ್ ಅವರಿಗೆ ಹಂಪಿ ಉತ್ಸವದ ಮೆರಗನ್ನು ಹೆಚ್ಚಿಸಿದ ಕೀರ್ತಿ ಸಲ್ಲುತ್ತದೆ. ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಹೆಚ್ಚು ಗೌರವ ನೀಡುತ್ತಿದ್ದ ಅವರು ಹಂಪಿ ಉತ್ಸವ ಆಚರಣೆಯನ್ನು ನಿರಂತರವಾಗಿ ಆಯೋಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಹಿಂದೆ ವಾರ್ತಾ ಇಲಾಖೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಭಾಗಿತ್ವದಲ್ಲಿ ಮೊದಲ ಬಾರಿಗೆ ಕಮಲ್ ಮಹಲ್ ಬಳಿ 2970 ರಲ್ಲಿ ಕಾರ್ಯಕ್ರಮ ಆಯೋಜಿಸಿ ಮುನ್ನುಡಿ ಹಾಕಿತ್ತು. ಬಳಿಕ ಎಂ.ಪಿ.ಪ್ರಕಾಶರು >>2











ಚಿತ್ರಗಳು : ಕೆ.ಎಂ.ಕೊಟ್ರೇಶ್





ಹಂಪಿ ಉತ್ಸವ–2025ರ ಮೊದಲ ದಿನ ಎಂ.ಪಿ.ಪ್ರಕಾಶ ಪ್ರಧಾನ ವೇದಿಕೆಯಲ್ಲಿ ಶುಕ್ರವಾರ ಸಂಜೆ ಹೊಸಪೇಟೆಯ ಸ್ವರಾರ್ಥ ಬೈ ಎಸ್‌ಎಫ್‌ಎಕ್ಸ್ ಚಾಪ್ ತಂಡದ ಗಾಯಕರಾದ ವಿಹಾನ್ ಅಭ್ಯುದಯ್, ಅಚಲ ಜಿ.ಎಸ್. ಆರ್.ಅಭಿನಂದನ್ ರೆಡ್ಡಿ, ಭರತ್‌ಗುಂಡಿ ಜಾನಪದ ಹಾಗೂ ಸುಗಮ ಸಂಗೀತದ ಹಾಡುಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಿದರು.

## ಸ್ಟುಡೆಂಟ್ ಕಾಲಂ

# ಮನಸಿದ್ದರೆ ಮಾರ್ಗ



ಮುತ್ತುಕೂರು ಎಂಬ ಒಂದು ಗ್ರಾಮ ಆ ಗ್ರಾಮದಲ್ಲಿ ಬಡ ದಂಪತಿಗಳು ಇದ್ದರು ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಒಬ್ಬ ಗಂಡು ಮಗ ಇದ್ದನು ಅವರಿಗೆ ತುಂಬಾನೇ ಕಷ್ಟ ಇತ್ತು ಆ ದಂಪತಿಗಳು ಮಕ್ಕಳೊಂದಿಗೆ ಹೂಗಳನ್ನು ಮಾರಿ ಜೀವನವನ್ನು ಸಾಗಿಸುತ್ತಿದ್ದರು ಆದರಿಂದ ಬರುವ ಹಣವು ಒಂದು ಒಪ್ಪತ್ತು ಊಟಕ್ಕೆ ಸಾಲುತಿರಲಿಲ್ಲ ಅದಕ್ಕೆ ಮಕ್ಕಳನ್ನು ಓದಿಸಲು ಸಾಧ್ಯವಾಗಿರಲಿಲ್ಲ ಅದಕ್ಕೆ ಮಕ್ಕಳನ್ನು ಬೇರೆಯವರ ಮನೆಗೆಲಸಕ್ಕೆ ಕಳುಹಿಸುತ್ತಿದ್ದರು

ಆ ಮನೆಯ ಯಜಮಾನನ ಹತ್ತಿರ ದಿನಪತ್ರಿಕೆ ಮತ್ತು ಪುಸ್ತಕ ಗಳನ್ನು ಕೇಳಿಕೊಂಡು ಓದುತ್ತಿದ್ದರು. ಎಲ್ಲೇ ಪೇಪರ್ ಬಿದ್ದರೂ ಆ ಪೇಪರ್ ನನ್ನು ಕಾಯ್ದುಕೊಂಡು ಓದುತ್ತಿದ್ದರು ಅಂತಹ ಕಷ್ಟದಲ್ಲಿ ಆ ಮಕ್ಕಳು ತಂದೆ ತಾಯಿಯನ್ನು ಸುಖವಾಗಿ ಇಟ್ಟುಕೊಳ್ಳಬೇಕೆಂದು ಬಯಸುತ್ತಿದ್ದರು ಆ ಮಕ್ಕಳು ತಂದೆ ತಾಯಿಗಿಂತ ಹೆಚ್ಚು ಪುಸ್ತಕಗಳನ್ನು ಪ್ರೀತಿಸುತ್ತಿದ್ದರು. ಮಕ್ಕಳು ಒಂದು ದಿನ ಸ್ಕೂಲ್ಗೆ ಹೋಗಬೇಕೆಂಬ ಆಸೆ ಆಗಿದೆ ಎಂದು ಹೇಳಿದ್ದಕ್ಕಾಗಿ ಆ ತಂದೆ ತಾಯಿಯವರು ಕಡು ಬಡತನದಲ್ಲಿಯೂ ಸರಕಾರಿ ಪ್ರೌಢಶಾಲೆಗೆ ಸೇರಿಸಿದರು.

ಆಗ ಒಂದು ದಿನ ಇದ್ದಕ್ಕಿದ್ದಂತೆ ತಂದೆ ತಾಯಿಯವರ ವ್ಯಾಪಾರ ಮಾಡಲು ರಸ್ತೆಯನ್ನು ದಾಟುತ್ತಿರುವಾಗ ಒಂದು ಲಾರಿ ಬಂದು ಗುದ್ದಿತು ಆದರಿಂದ ಅವರ ತಂದೆ ತಾಯಿಯವರು ನಿಧಾನರಾದರು

ಆಗ ಮಕ್ಕಳು ತುಂಬಾ ಕಷ್ಟಪಟ್ಟು ಶಾಲೆಗೆ ತುಂಬಾ ತಡವಾಗಿ ಹೋಗಿದ್ದಕ್ಕೆ ಅದಕ್ಕೆ ಶಿಕ್ಷಕರು ಶಿಕ್ಷೆ ಕೊಟ್ಟರು ಮರುದಿನ ಶಿಕ್ಷಕರು ಕೋಪ ಕೋಪಗೊಂಡು ದಿನಾಲು ತಡವಾಗಿ ಯಾಕೆ ಬರುತ್ತಿ ಬರುತ್ತೀರಾ ಎಂದು ಪ್ರಶ್ನಿಸಿದರು ಅದಕ್ಕೆ ಮಕ್ಕಳು ತನ್ನ ಮನೆಯ ಪರಿಸ್ಥಿತಿಯನ್ನು ಹೇಳಿಕೊಂಡರು ಆಗ ಶಿಕ್ಷಕರ ಕಣ್ಣಲ್ಲಿ ನೀರು ಬಂತು ಆಗ ಶಿಕ್ಷಕರು ಮಕ್ಕಳನ್ನು ಶಾಲೆ ಒಳಗೆ ಕರೆದುಕೊಂಡು ಹೋದರು ಮಕ್ಕಳು ಪುಸ್ತಕವನ್ನು ದೇವರೆಂದು ತಿಳಿದುಕೊಂಡು ಪುಸ್ತಕವನ್ನು ಗೆಳೆಯರಂತೆ ಮಾಡಿಕೊಂಡರು

ಕಷ್ಟದಲ್ಲಿ ಓದಿಕೊಂಡು ಒಬ್ಬ ಐಪಿಎಸ್ ಮತ್ತೊಬ್ಬರು ಡಿಸಿ ಇನ್ನೊಬ್ಬರು ಟೀಚರ್ ಆದರು ಕಷ್ಟದಲ್ಲಿರುವಾಗ ಮಕ್ಕಳಿಗೆ ಇವರೇ ಮಾದರಿ ಊರಿಗೆ ದೊಡ್ಡ ಹೆಸರು ಮತ್ತು ತಂದೆ ತಾಯಿಗೆ ಹೆಸರು ತಂದರು ಕಷ್ಟ ಅಂತ ಯಾವುದನ್ನು ಬಿಡಬಾರದು ಕಷ್ಟನು ಸುಖವಾಗುತ್ತದೆ ಕಷ್ಟಗಳು ಮನುಷ್ಯನಿಗೆ ಬಾರದೆ ಮರಗಳಿಗೆ ಬರುತ್ತೇವೆ , ಕಷ್ಟವನ್ನು ಹೆದರಿಸಿ,ಜಯಿಸಿ ನಿಂತರೆ ಖಂಡಿತ ಜಯ ನಮ್ಮದೇ

ಪುಸ್ತಕ ಹೇಳುತ್ತದೆ ನನ್ನನ್ನು ತಲೆತಗ್ಗಿಸಿ ಓದು ಮುಂದೊಂದು ದಿನ ತಲೆ ಎತ್ತುವಂತೆ ಮಾಡುತ್ತೇನೆ ಎಂದಿತು. ಮನುಷ್ಯ ಎಂತಹ ಪರಿಸ್ಥಿತಿಯಲ್ಲಿಯು ಏನೇ ತೊಂದರೆ ಇದ್ದರೂ ಮಾಡಬೇಕೆಂದಿರುವ ಕೆಲಸವನ್ನು ಮನಸ್ಸಿಟ್ಟು ಮಾಡಿದರೆ ಜಯ ಖಂಡಿತ , ಮನಸಿದ್ದರೆ ಮಾರ್ಗ ದೊರೆತೇ ದೊರೆಯುತ್ತದೆ

– **ಎಚ್ ಭಾರತಿ,** ಸರ್ಕಾರಿ ಪ್ರೌಢಶಾಲೆ ಬ್ಯಾಸಿಗಿದೇರಿ,
ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕು

## ನಿಮ್ಮ ಮಕ್ಕಳು ಅರಸರಾಗಬೇಕೆ?

**ಕನ್ನಡ ದಿನಪತ್ರಿಕೆ, ಪುಸ್ತಕಗಳನ್ನು ಮಕ್ಕಳ ಕೈಯಲ್ಲಿಡಿ. ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಹಂಪಿ ಉತ್ಸವ ವಿಜಯನಗರ ಅಧ್ಯಯನ ವಿಚಾರ ಸಂಕಿರಣ ಸಮ್ಮೇಳನ ಸರ್ವಾಧ್ಯಕ್ಷ ಡಾ.ಡಿ.ವಿ.ಪರಮಶಿವಮೂರ್ತಿ

ಕನ್ನಡ ನಾಡು, ನುಡಿ ಹಾಗೂ ಸಂಸ್ಕೃತಿಯ ಸಂಶೋಧನೆಗಾಗಿ ಉದಯಿಸಿದ ಕರ್ನಾಟಕದ ಪ್ರತಿಷ್ಠಿತ ಸಂಶೋಧನಾ ವಿಶ್ವವಿದ್ಯಾಲಯ ವಾದ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಪ್ರೊ. ಡಿ.ವಿ. ಪರಮಶಿವಮೂರ್ತಿ ಅವರು ನಾಡಿನ ಶ್ರೇಷ್ಠ ಶಾಸನತಜ್ಞರು, ಹಸ್ತಪ್ರತಿತಜ್ಞರು, ಸಂಸ್ಕೃತಿ ಸಂಶೋಧಕರು, ಸೌಜನ್ಯ–ಸರಳತೆಯ ಚಿಂತಕರು. ತಮ್ಮ ಬದುಕನ್ನು ಶಾಸನ ಹಾಗೂ ಸಂಸ್ಕೃತಿಯ ಸಂಶೋಧನಾ ಲೋಕಕ್ಕೆ ಮುಡುಪಿಟ್ಟ ಸಂಶೋಧನಾ ವಿಹಾರಿ. ಮಾರ್ಚ್ 03, 1963ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲ ಹೋಬಳಿಯ ದೊಡ್ಡಹೆಜ್ಜಾಜಿಯಲ್ಲಿ ಶ್ರೀ ಡಿ.ಎನ್. ವೀರಭದ್ರಯ್ಯ ಹಾಗೂ ಶ್ರೀಮತಿ ಶಾರದಮ್ಮರವರ ಉದರದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಬೆಂಗಳೂರಿನಲ್ಲಿ, ಪ್ರೌಢ ಶಿಕ್ಷಣವನ್ನು ದೊಡ್ಡಬೆಳವಂಗಲದಲ್ಲಿ, ಪದವಿಪೂರ್ವ ಶಿಕ್ಷಣವನ್ನು ತುಮಕೂರಿನ ಸಿದ್ಧಗಂಗಾ ಹಾಗೂ ಬೆಂಗಳೂರಿನ ವಿಶ್ವೇಶ್ವರಪುರಂ ಕಾಲೇಜಿನಲ್ಲಿ ಮುಗಿಸಿದ ಇವರು, ಬಿ.ಎ. ಪದವಿಯನ್ನು ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜು, ಸ್ನಾತಕೋತ್ತರ ಪದವಿಯನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ, ಶಾಸನಶಾಸ್ತ್ರ ಡಿಪ್ಲೋಮಾವನ್ನು ಕನ್ನಡ ಸಾಹಿತ್ಯ ಪರಿಷತ್ತಿನಿಂದ, ಬಿ.ಇಡಿ. ಪದವಿಯನ್ನು ಭಾರತ್ ಶಿಕ್ಷಣ ಸಂಸ್ಥೆಯಿಂದ ಪೂರ್ಣಗೊಳಿಸಿದರು. ನಂತರ ಪ್ರೊ. ಎಸ್. ವಿದ್ಯಾಶಂಕರ್ ಅವರ ಮಾರ್ಗದರ್ಶನದಲ್ಲಿ 'ಕನ್ನಡ ಶಾಸನಗಳ ಶಿಲ್ಪ: ಒಂದು ಅಧ್ಯಯನ' ವಿಷಯದ ಕುರಿತು ಪಿಎಚ್.ಡಿ. ಪದವಿಯನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ಪಡೆದರು. ಇವರ ಆರಂಭದ ವೃತ್ತಿಜೀವನವು ಚನ್ನಪಟ್ಟಣ ತಾಲ್ಲೂಕಿನ ಕೆಂಗಲ್ಲಿನ ಕುವೆಂಪು ಕಾಲೇಜು, ಬೆಂಗಳೂರಿನ ಶೇಷಾದ್ರಿಪುರಂ ಸ್ನಾತಕೋತ್ತರ ಕೇಂದ್ರ, ಶ್ರೀ ರೇಣುಕಾಚಾರ್ಯ ಕಾಲೇಜು, ಎಸ್.ಎಲ್.ಎನ್.ಕಾಲೇಜು, ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆಯ ಎ. ಎಫ್.ಆರ್.ಎಸ್. ಕಾಲೇಜು, ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜು, ಶ್ರೀ ಸತ್ಯಸಾಯಿ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿದರು. ನಂತರ ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ಹಸ್ತಪ್ರತಿ ಸಂರಕ್ಷಕರಾಗಿಯೂ ಕಾರ್ಯ ನಿರ್ವಹಿಸಿ ದ್ದುಂಟು. 1997ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿ ಸೇವೆಗೆ ಸೇರಿ, ನಂತರ ಸಹ ಪ್ರಾಧ್ಯಾಪಕರಾಗಿ ಬಡ್ತಿಪಡೆದರು. ತದ ನಂತರದಲ್ಲಿ ತುಮಕೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ಮೌಲ್ಯಮಾಪನ ಕುಲಸಚಿವರಾಗಿ, ಪ್ರಭಾರಿ ಕುಲಸಚಿವ(ಆಡಳಿತ)ರಾಗಿ, ಕಲಾ ನಿಕಾಯದ ಡೀನ್‌ರಾಗಿ, ಅತ್ಯಂತ ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ಸೇವೆಸಲ್ಲಿಸಿದ್ದಾರೆ. ಇವರು ಸೇವೆಸಲ್ಲಿಸಿದ ಎಲ್ಲಾ ವಿಶ್ವವಿದ್ಯಾಲಯಗಳಿಲ್ಲಿ ವಿವಿಧ ಶೈಕ್ಷಣಿಕ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಕನ್ನಡ ವಿಶ್ವವಿದ್ಯಾಲಯದಲ್ಲಿದ್ದಾಗ ಶಾಸನಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಘಟಕದ ಸಂಯೋಜಕರಾಗಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯದ ಮೇಲ್ವಿಚಾರಕರಾಗಿ ತಮ್ಮ ಕರ್ತವ್ಯವನ್ನು ಮೆರೆದವರು. ಅಲ್ಲದೇ ರಾಜ್ಯ ಮತ್ತು ಹೊರ ರಾಜ್ಯದ ಅನೇಕ ವಿಶ್ವವಿದ್ಯಾಲಯಗಳ ಅಧ್ಯಯನ ಮತ್ತು ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿ, ಸದಸ್ಯರಾಗಿ ಕರ್ತವ್ಯ ನಿಷ್ಠೆಯನ್ನು ತೋರಿದವರು. ವಿಶ್ವವಿದ್ಯಾಲಯ ಮಟ್ಟದ ಎಲ್ಲಾ ಶಿಕ್ಷಣ ಸಂಬಂಧಿತ ಚಟುವಟಿಕೆಗಳನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸಿದ ಕೀರ್ತಿಗೆ ಭಾಜನರಾದ ಇವರನ್ನು ಅನೇಕ ಹುದ್ದೆಗಳು ಹುಡುಕಿಕೊಂಡು ಬಂದವು.

ಯಾವುದೇ ಪ್ರಚಾರ ಬಯಸದೇ ಸುಮಾರು ನಾಲ್ಕು ದಶಕಗಳಿಂದ ಶಾಸನ ಕ್ಷೇತ್ರವನ್ನು ಪ್ರೀತಿಸುತ್ತಾ, ಆ ಕ್ಷೇತ್ರದಲ್ಲಿ ಕಾಯಕ ಮಾಡುತ್ತಿರುವ ಹಿರಿಯ ಸಂಶೋಧಕರಲ್ಲಿ ಓರ್ವರಾದ ಇವರು ಶಾಸನಾಧ್ಯಯವನ್ನು ಬಹುಶಿಸ್ತೀಯ ಮತ್ತು ಅಂತರ್‌ಶಿಸ್ತೀಯ ನೆಲೆಯಲ್ಲಿ ಅತ್ಯಂತ ಗಂಭೀರವಾಗಿ ಪರಿಗಣಿಸಿದ ವಿದ್ವಾಂಸರು. ಸದಾಕಾಲ ಶಾಸನ ಕ್ಷೇತ್ರವನ್ನೇ ಧ್ಯಾನಿಸುವ ಇವರು, ಇವರೆಗೆ 30ಕ್ಕೂ ಹೆಚ್ಚು ಮೌಲಿಕ ಸಂಶೋಧನಾತ್ಮಕ ಕೃತಿಗಳನ್ನು ಈ ನಾಡಿನ ಸಂಶೋಧನಾ ಕ್ಷೇತ್ರಕ್ಕೆ ನೀಡಿದ್ದಾರೆ. ಡಾ. ಎಂ. ಚಿದಾನಂದಮೂರ್ತಿಯವರ ಬರವಣಿಗೆಯ ಶೈಲಿಯನ್ನು, ಡಾ.ಎಂ.ಎಂ.ಕಲಬುರ್ಗಿಯವರ ಬಹು ಆಕರಗಳ ಬಳಕೆಯ ಶೈಲಿಯನ್ನು ಸಮ್ಮಿಳಿತಗೊಳಿಸಿಕೊಂಡಿರುವ ಇವರ ಶಾಸನಗಳ ಸಂಶೋಧನೆಯು ವಸ್ತುನಿಷ್ಠವಾದುದು. ವಿಶಿಷ್ಟವಾದ ವಿಶ್ಲೇಷಣೆಯಿಂದ ಶಾಸನಗಳ ವಿಷಯ ಸ್ವರೂಪದ ವ್ಯಾಪ್ತಿಯನ್ನು ಹಿಗ್ಗಿಸಿದವರು. ಸಂಶೋಧನ ಲೋಕಕ್ಕೆ ಇವರು ನೀಡಿದ ಕೊಡುಗೆ ಅನುಪಮವಾದುದು. ಚರಿತ್ರೆ, ಸಾಹಿತ್ಯ, ಸಂಶೋಧನ ಕ್ಷೇತ್ರದಇವರ ಪ್ರಮುಖ ಕೃತಿಗಳಲ್ಲಿಶಾಸನ ಸಂಶೋಧನೆ, ಸಂಶೋಧನೆ ಸಿರಿ, ಸಂವಹನ ಕನ್ನಡ, ಕನ್ನಡ ನಾಡಿನ ಚರಿತ್ರೆ,ಸಾಹಿತ್ಯ ಕರ್ನಾಟಕ, ಸಾಹಿತ್ಯ ಕರ್ನಾಟಕ ಭೂಪಟ, ಸ್ವಾಭಿಮಾನ ಗಳಿಕೆ, ಕಾವ್ಯಕಲ್ಪ, ಬಹುಮುಖಿ(ಸಂಪಾದನೆ), ಡಾ. ಎಂ.ಎಂ ಕಲಬುರ್ಗಿ–85(ಸಂಪಾದನೆ) ಮುಂತಾದವುಗಳ ಮೂಲಕ ತಮ್ಮದೇ ಆದ ವೈಶಿಷ್ಟ್ಯಪೂರ್ಣ ಚಿಂತನೆಗಳನ್ನು ದಾಖಲಿಸಿದ್ದಾರೆ; ಬಹುಮಾರ್ಮಿಕವಾಗಿ ವಿಶ್ಲೇಷಿಸಿದ್ದಾರೆ.

ಶಾಸನ ಕ್ಷೇತ್ರಕ್ಕೂ ಬಹುದೊಡ್ಡ ಕೊಡುಗೆಯನ್ನು ನೀಡಿದ ಇವರು ಶಾಸನದ ಕುರಿತಾಗಿ ರಚಿಸಿದ ಹಾಗೂ ಸಂಪಾದಿಸಿದ ಮಹತ್ವದ ಕೃತಿಗಳಲ್ಲಿ ಬಳ್ಳಾರಿ ಜಿಲ್ಲೆಯ ಶಾಸನಗಳು ಸಂಪುಟ–1 (ಸಂ.), ಕನ್ನಡ ಶಾಸನಶಿಲ್ಪ, ಕೊಪ್ಪಳ ಜಿಲ್ಲೆಯ ಶಾಸನಗಳು ಸಂಪುಟ–2 (ಸಂ.), ಹಂಪಿ ಶಾಸನಗಳು ಸಂಪುಟ–3 (ಸಂ.), ರಾಯಚೂರು ಜಿಲ್ಲೆಯ ಶಾಸನಗಳು ಸಂಪುಟ–7 (ಸಂ.), ಮುಳುಗಡೆ ಗ್ರಾಮಗಳಲ್ಲಿನ ಶಾಸನಗಳ ಅಧ್ಯಯನ, ಬಾಗಲಕೋಟೆ ಜಿಲ್ಲೆಯ ಶಾಸನಗಳು ಸಂಪುಟ–9 (ಸಂ.), ಪ್ರೌಢದೇವರಾಯನ ಶಾಸನಗಳು, ಕೃಷ್ಣದೇವರಾಯನ ಶಾಸನಗಳು ಸಂಪುಟ–1, ಬಿಜಾಪುರ ಜಿಲ್ಲೆಯ ಶಾಸನ ಸಂಪುಟ–10 (ಸಂ.), ಶಾಸನ ಅಧ್ಯಯನ ಸಂಪುಟ–4, ಸಂಚಿಕೆ 1 ಮತ್ತು 2, ಶಾಸನ ಅಧ್ಯಯನ ಸಂಪುಟ–5, ಸಂಚಿಕೆ 1 ಮತ್ತು 2, ತುಮಕೂರು ಜಿಲ್ಲಾ ಶಾಸನ ಸಮೀಕ್ಷೆ, ನೊಳಂಬರ ಶಾಸನಗಳು ಮುಂತಾದ ಸಂಪುಟಗಳು ಅತ್ಯಂತ ವ್ಯವಸ್ಥಿತವಾಗಿ ಸಂಪಾದಿತಗೊಂಡ ಮಾದರಿ ಸಂಪುಟಗಳು.

ಶಾಸನಗಳ ಅಧ್ಯಯನವು



ಆಳುವ ವರ್ಗದ ಅಂಶಗಳತ್ತಲೇ ಗಿರಕಿ ಹೊಡೆಯುತ್ತಿದ್ದ ಸಮಯದಲ್ಲಿ ಶಾಸನಗಳ ಅಧ್ಯಯನವನ್ನು ಜನಸಾಮಾನ್ಯರ ಅಧ್ಯಯನದ ಕಡೆಗೆ ತಿರುಗಿಸಿದ ಕೀರ್ತಿ ಇವರದು. ಪೆಣ್ಬುಯ್ಯಲ್, ತುರುಗೊಳ್ ಸಂಕಥನ ಕೃತಿಗಳು ಇಡೀ ಸಂಶೋಧನಾ ವಲಯದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದವುಗಳು. ಕೃಷ್ಣದೇವರಾಯ (ಆಯ್ದ ಲೇಖನ ಸಂಪುಟ), ಅಭಿಜಾತ(ಸಂಶೋಧನಾ ಲೇಖನಗಳ ಸಂಗ್ರಹ), ಭಾವಚಿಂತಾರತ್ನ ಟೀಕು, ಲಕ್ಕಣ್ಣ ದಂಡೇಶ ಮತ್ತು ಶಿವತತ್ತ್ವ ಚಿಂತಾಮಣಿ ಕೃತಿಗಳು ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸದಾ ದಾಖಲಾದಂಥವುಗಳು. ದಾನಚಿಂತಾಮಣಿ ಅತ್ತಿಮಬ್ಬೆ, ವಿಜಯನಗರ ಸ್ಥಾಪಕ ವಿದ್ಯಾರಣ್ಯ, ಸಮಾಜ ಸುಧಾರಕ ತೋಂಟದ ಸಿದ್ಧಲಿಂಗಯತಿ, ಕೃಷ್ಣದೇವರಾಯನ ರಾಣಿ ಚಿನ್ನಾದೇವಿ, ವಾರವಧು ಮಣ್ಣನೆಗೌರಲೆ, ಕರಸ್ಥಳದ ವೀರಣ್ಣೊಡೆಯ, ಮಹಾಸತಿ ದೇಕಬ್ಬೆ, ಪ್ರೌಢದೇವರಾಯ ಮೊದಲಾದವರ ಬಗ್ಗೆ ಮಹತ್ವದ ಶೋಧನೆಗಳನ್ನು ಮಾಡಿ, ಅವುಗಳನ್ನು ಪ್ರಕಟಿಸಿ, ಈವರೆಗಿನ ಅಭಿಪ್ರಾಯಗಳು ಹಾಗೂ ಊಹಾಪೋಹಗಳಿಗೆ ನೈಜತೆಯನ್ನು ನೀಡಿದ ಕೀರ್ತಿ ಇವರದು. ಕೃಷ್ಣದೇವರಾಯನ ಶಾಸನಗಳ ಶೋಧನೆ, ವಿಜಯನಗರ ಇತಿಹಾಸದ ಮೇಲೆ ಹೊಸ ಬೆಳಕು, ತೋಂಟದ ಸಿದ್ಧಲಿಂಗ ಯತಿಗಳ ಶಾಸನ ಶೋಧನೆ, ಕಂಪಿಲರಾಯನ ಶಾಸನ ಶೋಧನೆ, ನೊಳಂಬ ಅರಸರ ಶಾಸನಗಳ ಅಧ್ಯಯನ, ಶಾಸನ ಶಿಲ್ಪಗಳ ವಿಶೇಷ ಅಧ್ಯಯನ, ದೇಕಬ್ಬೆ ಶಾಸನ ಶಿಲ್ಪದ ಶೋಧನೆ ಮುಂತಾದ ಪ್ರಮುಖ ಮಹತ್ವದ ಶಾಸನ ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ. ಶಾಸನಶಾಸ್ತ್ರವನ್ನು ಓರಿಯಂಟಲಿಸ್ಟ್ ಶೈಲಿಯಲ್ಲಿ ಅಧ್ಯಯನ ಮಾಡುವ ಕ್ರಮವನ್ನು ಬದಲಾಯಿಸಿಕೊಂಡ ಇವರು ಪಠ್ಯಕೇಂದ್ರಿತ ಶಾಸನ ಅಧ್ಯಯನವನ್ನು ಕಾರಣ ಮತ್ತು ಪರಿಣಾಮ ಕೇಂದ್ರಿತವಾಗಿ ರೂಪಿಸಿಕೊಂಡು ಅನೇಕ ಮಹತ್ವದ ಶೋಧನೆಗಳನ್ನು ಕೈಗೊಂಡಿರುವುದು ಬಹುಮಹತ್ವದ ಹೆಜ್ಜೆಯಾಗಿದೆ.

ಪ್ರೊ. ಪರಮಶಿವಮೂರ್ತಿ ಅವರ ವಿಶೇಷವಾದ ಅಧ್ಯಯನ ಕ್ಷೇತ್ರಗಳೆಂದರೆ ಶಾಸನಗಳ ಅಧ್ಯಯನ, ಲಿಪಿಗಳ ಅಧ್ಯಯನ, ಹಳಗನ್ನಡ ಸಾಹಿತ್ಯ ಅಧ್ಯಯನ, ಹಸ್ತಪ್ರತಿಗಳ ಅಧ್ಯಯನ, ತಾಳೆಗರಿಗಳ ಅಧ್ಯಯನ, ಪ್ರಾಚೀನ ಸಾಹಿತ್ಯದ ಸಂಪಾದನೆ, ಮಧ್ಯಕಾಲೀನ ಕನ್ನಡ ಸಾಹಿತ್ಯ ಸಂಶೋಧನೆ, ಕರ್ನಾಟಕ ಸಂಸ್ಕೃತಿ ಸಂಶೋಧನೆ, ಸ್ಥಳೀಯ ಚರಿತ್ರೆ ಸಂಶೋಧನೆ ಮುಂತಾದವುಗಳ ಕುರಿತಾಗಿ ವಿಶೇಷವಾದ ಆಸಕ್ತಿಯನ್ನು ಹೊಂದಿದ್ದಾರೆ. ಇವರ ಸುಮಾರು 250 ಕ್ಕಿಂತ ಹೆಚ್ಚು ಸಂಶೋಧನ ಲೇಖನಗಳು ವಿವಿಧ ಗ್ರಂಥಗಳಲ್ಲಿ ಹಾಗೂ ಮಹತ್ವದ ಪತ್ರಿಕೆಗಳಲ್ಲಿ ಪ್ರಕಟಗೊಂಡು ಓದುಗರ ಗಮನಸೆಳೆಯುವುದರ ಜೊತೆಗೆ ಸಂಶೋಧಕರುಗಳಿಗೆ ಆಕರಗಳಾಗಿವೆ. ಅವುಗಳಲ್ಲಿ ಬೇಲಿಮಠದ ಶಾಸನ, ದೇಕಬ್ಬೆ ಶಾಸನ, ನಂದಿಗುಡಿಯಲ್ಲಿ ಕಿಳ್ಗುಂಟೆ ಶಾಸನ ಪತ್ತೆ, ನಿಡುಗಲ್ಲು ಚನ್ನಪ್ಪನ ಹೊಸ ವಿಷಯಗಳು, ಅಂಬಲಗೆರೆಯ ದಾನಶಾಸನ, ನೇಮಿಜಿನೇಶ ಸಂಗತಿ, ಗುಡಿಬಂಡೆಯ ಜೈನ ಶಾಸನಗಳು, ಶಾಸನ ಮತ್ತು ಕ್ಷೇತ್ರಕಾರ್ಯ, ಎಂ.ವಿ. ಸೀತಾರಾಮಯ್ಯರ ಪಾಂಡಿತ್ಯ ಕೃತಿಗಳು, ಹದಿನಾಡು ಅರಸರ ವಂಶಾವಳಿ, ಹದಿನಾಡು ಮನೆತನ, ಗುಮ್ಮನಾಯಕನ ಪಾಳೆಯಗಾರರು, ಶಾಸನಗಳಲ್ಲಿ ಯುದ್ಧ–ಶಾಂತಿ, ನಿಡುಗಲ್ಲು ಪಾಳೆಯಗಾರರು, ಶಾಸನ ಶಿಲ್ಪಗಳು, ಜಾತಿನಾಶಂ ಮಾಡಿ–ಶಬ್ದ ವಿವೇಚನೆ ಮತ್ತು ಹೊಟ್ಟೂರು ಶಾಸನ ಮುಂತಾದವುಗಳು ಬಹಳ ಪ್ರಮುಖ ಸಂಶೋಧನಾ ಲೇಖನಗಳಾಗಿವೆ. ಇವರು ನವದೆಹಲಿಯ ವಿಶ್ವವಿದ್ಯಾಲಯ ಧನಸಹಾಯ ಆಯೋಗದಿಂದ 'ಪಶುಸಂರಕ್ಷಣಾ ಬಲಿದಾನಗಳು' ಮತ್ತು ಕರ್ನಾಟಕ ಸರ್ಕಾರದ ಕನ್ನಡ ಶಾಸ್ತ್ರೀಯ ಭಾಷೆಯ ಯೋಜನೆಯಲ್ಲಿ'ಕನ್ನಡ ಲಿಪಿಯ ಸರಳೀಕರಣ ಪ್ರಕ್ರಿಯೆ' ಎಂಬ ವಿದ್ವತ್‌ಪೂರ್ಣ ಸಂಶೋಧನಾ ಯೋಜನೆಗಳ ರುವಾರಿ ಎನಿಸಿಕೊಂಡವರು. ಈ ಯೋಜನೆಗಳು ಸಂಶೋಧನಾ ಕ್ಷೇತ್ರದಲ್ಲಿ ತಮ್ಮ ಮಹತ್ವದ ಹೆಜ್ಜೆ ಗುರುತುಗಳನ್ನು ಮೂಡಿಸಿವೆ.

ಪ್ರೊ. ಡಿ.ವಿ.ಪರಮಶಿವಮೂರ್ತಿ ಅವರು ತಾವೂ ಬೆಳೆದರಲ್ಲದೆ, ತಮ್ಮ ವಿದ್ಯಾರ್ಥಿಗಳನ್ನು ಬೆಳೆಸಿದರು. ತಮ್ಮ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಅಧ್ಯಯನವನ್ನು ಕೈಗೊಂಡ ವಿದ್ಯಾರ್ಥಿಗಳಿಗೆ ಮಹತ್ವದ ವಿಷಯಗಳ ಕುರಿತು ಸಂಶೋಧನೆ ಯನ್ನು ಮಾಡಿಸಿದ್ದಾರೆ. ಮುಖ್ಯವಾಗಿ ಶಾಸನ ಮತ್ತು ಶಾಸನಶಿಲ್ಪಗಳ ಕುರಿತಾಗಿ ಮಹತ್ವದ ಸಂಶೋಧನೆಗಳು ಅವರಿಂದ ಹೊರ ಹೊಮ್ಮಿವೆ. ಅವರೆಲ್ಲಾ ಆಯ್ಕೆಮಾಡಿ ಕೊಂಡ ವಿಷಯದ ಮೇಲೆ ಹೊಸಬೆಳಕು ಚೆಲ್ಲಿದ್ದಾರೆ. ಅಂತೆಯೇ ವಿದ್ಯಾರ್ಥಿಗಳಿಗೆ ಬಹಳ ಅಚ್ಚುಮೆಚ್ಚಿನ ಗುರುಗಳು ಹೌದು.

ಇಂದಿಗೂ ಕ್ಷೇತ್ರಕಾರ್ಯವನ್ನು ಪ್ರೀತಿಸುವ, ಬೆಟ್ಟ–ಗುಡ್ಡ ಅಡವಿಗಳನ್ನು ಸುತ್ತಾಡುವ, ಸದಾ ಗ್ರಾಮೀಣ ಕರ್ನಾಟಕದ ಸಂಚಾರಿ ಆದ ಪ್ರೊ. ಪರಮಶಿವಮೂರ್ತಿ ಅವರು ದಣಿವರಿಯದ ವಿದ್ವಾಂಸರು. ಹಿತಮಿತ ನುಡಿ, ಮೃದು ವ್ಯಕ್ತಿತ್ವ, ಕ್ರಿಯಾಶೀಲ ಮನಸ್ಸು, ಸದಾ ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನೆಯೊಂದಿಗೆ ತಮ್ಮನ್ನು ತಾವೂ ಗುರುತಿಸಿಕೊಂಡ ಉತ್ತಮ ವಾಗ್ಮಿಗಳೂ ಹೌದು. ಸತತವಾದ ಅಧ್ಯಯನದಿಂದ ಸಂಶೋಧನಾ ಕ್ಷೇತ್ರದಲ್ಲಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದವರು. ಅಪ್ಪಟ ಮನುಷ್ಯ ಪ್ರೀತಿಯ ಹೃದಯದವರು. ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ಸದಾಕಾಲ ಶಾಸನ ಕ್ಷೇತ್ರವನ್ನು ಧ್ಯಾನಿಸುವ ಕ್ರಿಯಾಶೀಲ ಮನಸ್ಸು ಇವರದು.

ಈ ನಾಡಿನ ಸಾಹಿತ್ಯ, ಸಂಸ್ಕೃತಿ ಹಾಗೂ ಶಾಸನ ಕ್ಷೇತ್ರಕ್ಕೆ ಇವರು ನೀಡಿದ ಕೊಡುಗೆಯನ್ನು ಗುರುತಿಸಿ ಅನೇಕ ಪ್ರಶಸ್ತಿ–ಗೌರವ–ಸನ್ಮಾನಗಳು ಇವರನ್ನು ಹುಡುಕಿಕೊಂಡು ಬಂದಿವೆ. ಬೆಂಗಳೂರಿನ ಕರ್ನಾಟಕ ಸಾಹಿತ್ಯ, ಸಂಸ್ಕೃತಿ ಸಂಘದಿಂದ ಸರ್.ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ, ಬೆಂಗಳೂರಿನ ಕರ್ನಾಟಕ ಇತಿಹಾಸ ಅಕಾದೆಮಿಯಿಂದ ಡಾ. ಬಾ.ರಾ. ಗೋಪಾಲ್ ಶಾಸನತಜ್ಞ ಪ್ರಶಸ್ತಿ, ನೊಳಂಬಶ್ರೀ ಪ್ರಶಸ್ತಿ, ಬೆಂಗಳೂರು ಜಿಲ್ಲೆಯ ನೆಲಮಂಗಲದ ವನಕಲ್ಲು ಮಠದ ಡಾ. ಶ್ರೀ ಶ್ರೀ ಶಿವಕುಮಾರಸ್ವಾಮಿ ಪ್ರಶಸ್ತಿ, ಕರ್ನಾಟಕ ಸರ್ಕಾರದ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮೈಕೊ ಕನ್ನಡ ಬಳಗದ ಕಿಟ್ಟೆಲ್ ಸ್ಮಾರಕ ಪ್ರಶಸ್ತಿ, ಸೋದೆ ಸದಾಶಿವರಾಯ ಪ್ರಶಸ್ತಿ ಇನ್ನೂ ಮುಂತಾದ ಪ್ರಶಸ್ತಿಗಳು ಲಭಿಸಿವೆ. ಶಾಸನಗಳ ಸಂಶೋಧನಾ ಕಾರ್ಯವನ್ನು ಅತ್ಯಂತ ಶಿಸ್ತುಬದ್ಧವಾಗಿ ಮುನ್ನೆಡಿಸಿಕೊಂಡು ಬಂದ ಇವರ ಸಂಶೋಧನ ವೈಖರಿ, ಇವರಲ್ಲಿ ಹುದುಗಿದ ಸತ್ಯಶೋಧನ ನಿಷ್ಠುರತೆ ಇವರನ್ನು ನಾಡಿನ ಪ್ರಖ್ಯಾತ ಶಾಸನತಜ್ಞರನ್ನಾಗಿ ಮಾಡಿದೆ.

ಇಂತಹ ಶ್ರೇಷ್ಠ ಶಾಸನತಜ್ಞರನ್ನು ಕರ್ನಾಟಕ ಸರ್ಕಾರದ ವಿಜಯನಗರ ಜಿಲ್ಲಾ ಆಡಳಿತದಿಂದ ನಡೆಯುವ ಹಂಪಿ ಉತ್ಸವದ ನಿಮಿತ್ಯವಾಗಿ ಪುರಾತತ್ವ, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಇದೇ 2025ರ ಮಾರ್ಚ್ 1 ಮತ್ತು 2ರಂದು ಹಂಪಿಯಲ್ಲಿ ಜರುಗುವ ವಿಜಯನಗರ ಅಧ್ಯಯನದ ಕುರಿತ 27ನೇ ವಾರ್ಷಿಕ ವಿಚಾರ ಸಂಕಿರಣದ ಸರ್ವಾಧ್ಯಕ್ಷರನ್ನಾಗಿ ಆಯ್ಕೆಮಾಡಿರುವುದು ಇವರು ವಿಜಯನಗರ ಸಾಮ್ರಾಜ್ಯದ ಶಾಸನ ಗಳ ಕ್ಷೇತ್ರಕ್ಕೆ ನೀಡಿದ ಕೊಡುಗೆ ಹಾಗೂ ಇವರ ಸರ್ವಶ್ರೇಷ್ಠ ಸಂಶೋಧನ ಬದುಕಿಗೆ ಸಂದ ಗೌರವವಾಗಿದೆ.

**– ಡಾ. ಡಿ. ವೀರೇಶ**
ಸಂಶೋಧಕರು, ಹೂವಿನಹಡಗಲಿ,

# ಹಂಪಿ ಉತ್ಸವ ಮುಂದಿನ ವರ್ಷ ಮತ್ತಷ್ಟು ಅದ್ದೂರಿ : ಸಚಿವ ಜಮೀರ್ ಖಾನ್

**ಮೊದಲ ಪುಟದಿಂದ**

1987 ರಲ್ಲಿ ಹಂಪಿಯಲ್ಲಿ ಉತ್ಸವ ಆರಂಭಿಸಿ ಈ ಭಾಗದಲ್ಲಿ ಕಲೆ ಮತ್ತು ಸಾಂಸ್ಕೃತಿಕ ಉತ್ತೇಜನ ನೀಡಿದವರ ಸ್ಮರಣೆ ಇಂದಿಗೂ ಮರೆಯಲು ಸಾಧ್ಯವಿಲ್ಲ. ನಿಷ್ಠುರವಾದ ರಾಜಕಾರಣಿ ಎಂ.ಪಿ.ಪ್ರಕಾಶ ಅವರು ನಮಗೆ ಮಾದರಿ. ಇತಿಹಾಸದ ಬಗ್ಗೆ ಬೆಳಕು ಚೆಲ್ಲುವ ಹಂಪಿ ಉತ್ಸವದ ಮಾದರಿಯಿಂದ ಈ ಭಾಗದಲ್ಲಿ ಅನೆಗೊಂದಿ ಉತ್ಸವ ಮತ್ತು ಕನಕಗಿರಿ ಉತ್ಸವ ಆಯೋಜಿಸಿ ವಿಜಯನಗರ ಸಾಮ್ರಾಜ್ಯದ ವಿಶೇಷತೆಯನ್ನು ಬಿಂಬಿಸಲಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಿಜಯನಗರ ಕ್ಷೇತ್ರದ ಶಾಸಕರಾದ ಹೆಚ್. ಆರ್. ಗವಿಯಪ್ಪ ಅವರು ಮಾತನಾಡಿ ಎಂ. ಪಿ. ಪ್ರಕಾಶ ಅವರು ಹಂಪಿ ಉತ್ಸವವನ್ನು ಮೊದಲಿಗೆ ಆರಂಭಿಸಿದರು. ಇದು ವರ್ಷದಿಂದ ವರ್ಷಕ್ಕೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಇದಕ್ಕೆ ಜಿಲ್ಲೆಯ ಸಚಿವರು ಹೆಚ್ಚು ಅನುದಾನವನ್ನು ನೀಡಿ ಕಳೆದ ವರ್ಷಕ್ಕಿಂತ ಮೂರು ಪಟ್ಟು ಹೆಚ್ಚಾಗಿ ಈ ವರ್ಷ ಮಾಡಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದರ ಜೊತೆಗೆ ಇದರ ಯಶಸ್ವಿಗಾಗಿ ಶ್ರಮಿಸುತ್ತಿರುವ ಎಲ್ಲಾ ಅಧಿಕಾರಿಗಳಿಗೂ ಈ ಸಂದರ್ಭದಲ್ಲಿ ಶುಭ ಕೋರುತ್ತೇನೆ ಎಂದರು.

ಚಿತ್ರನಟ ರಮೇಶ್ ಅರವಿಂದ್ ಮಾತನಾಡಿ ಅಂದು ಇಂದು ಎಂದೆಂದಿಗೂ ಕನ್ನಡಿಗರು ಶ್ರೇಷ್ಠರು. ಹಂಪಿಯಂತಹ ಸುಂದರ ತಾಣ ಮತ್ತೊಂದಿಲ್ಲ ಇದನ್ನು ನೋಡಲು ಸಾವಿರ ಕಣ್ಣು ಬೇಕು. ಇದೇ ಜಾಗದ ರಸ್ತೆಯಲ್ಲಿ ಚಿನ್ನ. ವಜ್ರ. ವೈಡೋರ್ಯಗಳನ್ನು ಮಾರುತ್ತಿದ್ದರು. ಆ ಕಾಲದಲ್ಲಿ ಸ್ತಂಭಗಳಲ್ಲಿ ಸಂಗೀತ ಹಾಡಿದ್ದು. 500 ವರ್ಷಗಳಿಂದ ಇರುವ ಹಂಪಿಯ ಕಲ್ಲಿನ ರಥ ಅದ್ಭುತ ಅದರ ಮೌಲ್ಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರದ ಸಂಸದರಾದ ರಾಜಶೇಖರ್ ಹಿಟ್ನಾಳ್, ಹಗರಿಬೊಮ್ಮನಹಳ್ಳಿ ಕ್ಷೇತ್ರದ ಶಾಸಕರಾದ ಕೆ. ನೇಮಿರಾಜ ನಾಯ್ಕ. ಹಡಗಲಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೃಷ್ಣನಾಯಕ. ಕೂಡ್ಲಿಗಿ ಕ್ಷೇತ್ರದ ಶಾಸಕರಾದ ಡಾ.ಎನ್.ಟಿ. ಶ್ರೀನಿವಾಸ. ಹರಪನಹಳ್ಳಿ ಕ್ಷೇತ್ರದ ಶಾಸಕಿ ಲತಾ ಮಲ್ಲಿಕಾರ್ಜುನ, ರಾಜವಂಶಸ್ಥರಾದ ಕೃಷ್ಣದೇವರಾಯ ಆನೆಗೊಂದಿ. ದಯಾನಂದಪುರಿ ಮಹಾಸ್ವಾಮಿಗಳು ಗಾಯತ್ರಿ ಪೀಠ ಹಂಪಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಡಾ. ಕೆ. ಧರಣಿದೇವಿ, ಹೂಡಾ ಅಧ್ಯಕ್ಷರು ಇಮಾಮ್ ನಿಯಾಜಿ, ಐಜಿಪಿ ಲೋಕೇಶ್ ಕುಮಾರ್, ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್. ಸಿಇಓ ನೋಂಗ್ಜಾಯ್ ಮೋಹ್ಮದ್ ಅಲಿ ಅಕ್ರಮ್ ಷಾ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಹರಿ ಬಾಬು ಬಿ.ಎಲ್. ಚಿತ್ರನಟಿಯರಾದ ಪ್ರೇಮ ಹಾಗೂ ಪೂಜಾ ಗಾಂಧಿ. ಜಿಲ್ಲೆಯ ನಾಗರಿಕರು ಸೇರಿದಂತೆ ಹಲವಾರು ಜನರು ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಬದುಕಬೇಕಿದೆ

ಬದುಕಬೇಕಿದೆ ಎಲ್ಲರೆದುರು
ಬವಣೆ ಎನ್ನದೆ!
ಕಳೆಗಟ್ಟಬೇಕಿದೆ ಎಲ್ಲರೆದುರು
ಉಸಿರುಗಟ್ಟದೆ!
ಶಿಲೆಯಾಗಬೇಕಿದೆ ಎಲ್ಲರೆದುರು
ಹುಳಿಪೆಟ್ಟೆನ್ನದೆ!
ಗಟ್ಟಿಯಾಗಬೇಕಿದೆ ಎಲ್ಲರೆದುರು
ಬೆಂದೆನೆನ್ನದೆ!
ನಗಬೇಕಿದೆ ಎಲ್ಲರೆದುರು
ನೋವೆನ್ನದೆ!
ಸಾಗಬೇಕಿದೆ ಎಲ್ಲರೆದುರು
ಸಾಕೆನ್ನದೆ!
ಸರಿಕರಾಗಬೇಕಿದೆ ಎಲ್ಲರೆದುರು
ಸಂಕಟವೆನ್ನದೆ!
ದುಡಿಯಬೇಕಿದೆ ಎಲ್ಲರೆದುರು
ಧಣಿವೆನ್ನದೆ!
ಚಿಗುರಬೇಕಿದೆ ಎಲ್ಲರೆದುರು
ಚಿಂತೆ ಎನ್ನದೆ!

– ವೀರೇಶ ಎಸ್ ಎಸ್
ಶಿವಪುರ, ಕೂಡ್ಲಿಗಿ ತಾ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!

# ಸಿರಿಧಾನ್ಯದಲ್ಲಿ ಮೂಡಿದ ಅನ್ನದಾತ

## ಸಾವಯವ ಮತ್ತು ಸಿರಿಧಾನ್ಯ ವಸ್ತು ಪ್ರದರ್ಶನ | ಸಚಿವ ಜಮೀರ್ ಅಹ್ಮದ್ ಖಾನ್ ಚಾಲನೆ



**ಹಂಪಿ ಟೈಮ್ಸ್ ಹೊಸಪೇಟೆ**

ಸಿರಿಧಾನ್ಯ ರಂಗೋಲಿಯಲ್ಲಿ ಚಿತ್ತಾಕರ್ಷಕವಾಗಿ ಮೂಡಿದ ನೇಗಿಲು ಹಿಡಿದ ಅನ್ನದಾತ ಹಾಗೂ ಕೃಷಿ ಇಲಾಖೆ ಯೋಜನೆ ಹಾಗೂ ಕಾರ್ಯಕ್ರಮಗಳು ನೋಡುಗರ ಗಮನ ಸೆಳೆಯಿತು.

ಹಂಪಿಯ ಮಾತಂಗ ಪರ್ವತ ಮೈದಾನದಲ್ಲಿ, ಶುಕ್ರವಾರ ಹಂಪಿ ಉತ್ಸವ ಅಂಗವಾಗಿ ಕೃಷಿ ಇಲಾಖೆಯಿಂದ ಆಯೋಜಿಸಿದ್ದ ಸಾವಯವ ಮತ್ತು ಸಿರಿಧಾನ್ಯ, ಕೃಷಿ ವಸ್ತು ಪ್ರದರ್ಶನಕ್ಕೆ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಚಾಲನೆ ನೀಡಿದರು.

ಸಿರಿಧಾನ್ಯಗಳ ಬಳಕೆ ಹಾಗೂ ಉತ್ತೇಜನ ನೀಡುವ ನಿಟ್ಟಿನಲ್ಲಿ ಸಿರಿಧಾನ್ಯ ಬೆಳೆಗಳು, ಬೆಳೆಕಾಳುಗಳು, ಇತರೆ ಧಾನ್ಯಗಳಿಂದ ನೇಗಿಲು ಹಿಡಿದ ರೈತ ಹಾಗೂ ಕೃಷಿ ಇಲಾಖೆಯ ಮುಖ್ಯ ಯೋಜನೆಗಳಾದ ಕೃಷಿ ಯಾಂತ್ರಿಕರಣ, ಸಂಸ್ಕರಣೆ, ಮಣ್ಣು ಆರೈಕೆ ಅಭಿಯಾನ, ಸೂಕ್ಷ್ಮ ನೀರಾವರಿ ಯೋಜನೆಗಳನ್ನು ರಂಗೋಲಿ ಚಿತ್ತಾರದ ಮೂಲಕ ವೈವಿಧ್ಯಮಯವಾಗಿ ರಚಿಸಲಾಗಿತ್ತು. ಸಾವಯವ ಮತ್ತು ಸಿರಿಧಾನ್ಯಗಳ ವಸ್ತು ಪ್ರದರ್ಶನದಲ್ಲಿ ಜಲ ಸಂರಕ್ಷಣೆ, ಮಣ್ಣಿನ ಸಂರಕ್ಷಣೆ ಮತ್ತು ಜಮೀನುಗಳಲ್ಲಿ ನೀರಿನ ಹೊಂಡ ನಿರ್ಮಾಣ ಹಾಗೂ ಮಿಶ್ರ ಬೇಸಾಯದ ಜತೆಗೆ ಸಮಗ್ರ ಹಾಗೂ ಸುಸ್ಥಿರ ಕೃಷಿ ಮಾದರಿಗಳನ್ನು ಪ್ರದರ್ಶಿಸುವ ಮೂಲಕ ರೈತರಿಗೆ ಕೃಷಿ ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಗಿದೆ.

**ಹಳ್ಳಿಮನೆ ಆಕರ್ಷಣೆ: ಸೋಬಾನೆಯ ಸೊಬಗು:**

ಕೃಷಿ ಇಲಾಖೆಯ ವಸ್ತು ಪ್ರದರ್ಶನದಲ್ಲಿ ನಿರ್ಮಿಸಲಾದ ಹಳ್ಳಿಮನೆ ಕಲ್ಪನೆ ಗ್ರಾಮೀಣ ಸೊಗಡಿನ ಚಿತ್ರಣ ನೈಜವಾಗಿ ನೋಡುಗರಿಗೆ ಕಟ್ಟಿಕೊಡುತ್ತಿದೆ. ಬೀಸುವ ಕಲ್ಲು, ನೀರಿನ ಬಾವಿ, ಒನಕೆಯ ಮೂಲಕ ಧಾನ್ಯಗಳ ಒಕ್ಕಣೆ, ಹೊಸಿಗೆ ಎಲ್ಲವೂ ಕಳೆದ ಹೋದ ಗ್ರಾಮೀಣ ಜನ ಜೀವನವನ್ನು ನೋಡುಗರಿಗೆ ಕಟ್ಟಿಕೊಡುತ್ತದೆ. ಇನ್ನೂ ಹಗರಿ ಬೊಮ್ಮನಹಳ್ಳಿ ತಾಲ್ಲೂಕಿನ ಹಂಪಸಾಗರದ ರೇಣುಕಮ್ಮ, ಹುಲಿಗೆಮ್ಮ, ಹನುಮಕ್ಕ, ಹುಚ್ಚಿಂಗಮ್ಮ ಹಾಗೂ ಗೌರಮ್ಮ ಹಾಡಿದ ಸೋಬಾನ ಪದಗಳು ಜಾನಪದ ಸಾಹಿತ್ಯ ಸೊಬಗನ್ನು ಬಿಂಬಿಸುತ್ತಿವೆ. ಸಚಿವ ಜಮೀರ್ ಅಹ್ಮದ್ ಖಾನ್ ಮಹಿಳೆಯರೊಂದಿಗೆ ಕೂತು ಬೀಸುಕಲ್ಲಿನಲ್ಲಿ ಧಾನ್ಯಗಳನ್ನು ಬೀಸಿದರು. ಒಕ್ಕಣೆಯಲ್ಲಿ ಒನಕೆ ಹಿಡುದು ಕಾಳು ಒಪ್ಪಮಾಡಿದರು. ಹಳ್ಳಿ ಮನೆ ಮುಂದಿನ ಬಾವಿಯಲ್ಲಿ ನೀರು ಸೇದಿದರು. ಜಿಲ್ಲಾ ಉಸ್ತುವಾರಿ ಸಚಿವರಿಗೆ ಶಾಸಕ ಹೆಚ್.ಆರ್. ಗವಿಯಪ್ಪ, ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ಜೊತೆಯಾದರು.

ನಂತರ ಕುರುವತ್ತಿ ಬಸವೇಶ್ವರ ಪ್ರತಿಕೃತಿ, ಸಿರಿಧಾನ್ಯಗಳಿಂದ ನಿರ್ಮಿಸಲಾಗಿರುವ ನೇಗಿಲು ಹಿಡಿದ ರೈತ ಹಾಗೂ ಕೃಷಿ ಇಲಾಖೆಯ ಮುಖ್ಯ ಯೋಜನೆಗಳನ್ನು ವೀಕ್ಷಿಸಿದರು. ಈ ವೇಳೆ ಜಿ.ಪಂ ಸಿಇಒ ನೊಂಗ್ಜಾಯ್ ಮೊಹಮ್ಮದ್ ಅಕ್ರಮ್ ಅಲಿ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಲ್. ಶ್ರೀಹರಿ ಬಾಬು, ಕೃಷಿ ಇಲಾಖೆ ಜಂಟಿ ನಿರ್ದೇಶಕ ಶರಣಪ್ಪ ಮುದಗಲ್ ಸೇರಿದಂತೆ ಹಲವು ಗಣ್ಯರು, ರೈತರು, ಸಾರ್ವಜನಿಕರು ಇದ್ದರು.





ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಕ್ರೋಧಿ

**01–03–2025 – ಶನಿವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವಾಭಾದ್ರಪದ |
| ಯೋಗ | : ಸಾಧ್ಯ |
| ಕರಣ | : ಬಾಳವ |
| ಸೂರ್ಯೋದಯ | : 06:49:45 |
| ಸೂರ್ಯಾಸ್ತ | : 18:28:57 |
| ರಾಹು ಕಾಲ | : 09:45–11:12 |
| ಯಮಘಂಡ ಕಾಲ | : 14:07–15:34 |
| ಗುಳಿಕ ಕಾಲ | : 06:50–08:17 |



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 28–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1607.62 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7091 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 33.126 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1586.90 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 893 ಕ್ಯುಸೆಕ್ |
| ಸಾಮರ್ಥ್ಯ | 8.630 ಟಿಎಂಸಿ |

# ಹಂಪಿ ಉತ್ಸವ–2025ರ ಚಿತ್ರಾವಳಿ




















## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI
ಈಗಿಂದಲೇ ಪುನರ್‌ಮನನ ಮಾಡಿ
ಪರೀಕ್ಷೆಗೆ ನಾವು ಸಿದ್ಧ 21 ದಿನ
ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು
https://epaper.hampitimes.com

ನಿನ್ನ ಏಳಿಗೆ ನೀನೇ ಶಿಲ್ಪಿ
ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಹಿಂದಿ

**10 ನೇ ತರಗತಿ ಹಿಂದಿ**

* निम्नलिखित प्रथम दो शब्दों के सूचित संबंधों के अनुरूप तीसरे शब्द का संबंधित शब्द लिखिए :

1) पताका : न्याय का प्रतीक :: दीप : ------- ( ज्ञान का प्रतीक )
2) हस्त : हाथ :: पताका: ------------ ( झंडा )
3) बायें हाथ में : न्याय का पताका :: दाहिने हाथ में : ----------- ( ज्ञान का दीप )
4) कश्मीरी सेब बेचनेवाला : बेईमानी :: रेवडी बेचनेवाला : ----------- ( ईमानदार )
5) नागपुर : संतरा :: कश्मीर : ---------- ( सेब )
6) सेब : फल :: गाजर : ---------- (सब्जी )
7) कपडा : नापना :: टोमाटो : ---------- ( तौलना )
8) गिल्लू की प्रिय लता : सोनजुही :: गिल्लू की प्रिय खाद्य : -------------- ( काजू )
9) कौआ : काँव - काँव :: गिल्लू : ----------- ( चिक -चिक )
10) गिल्लू की पूँछ : झब्बेदार :: गिल्लू की आँखे : ----------- ( चंचल चमकीली )
11) गुलाब : पौधा : सोनजुही : -------- ( लता )
12) कोयल : मधुर स्वर :: कौआ : --------- ( कर्कश स्वर )
13) हंस : सफेद :: कौआ : ----------- ( काला )
14) अब्दुल कलाम की माता : आशियम्मा :: अब्दुल कलाम के पिता: ---------- ( जैनुलाबदीन )
15) रामनंद शास्त्री : पक्षी लक्ष्मण शास्त्री :: अब्दुल कलाम :------------ ( जैनुलाबदीन )
16) जैनुलाबदीन :आशियम्मा :: जलालुद्दीन : ------------( जोहरा )
17) जलालुद्दीन : जीजा :: शम्सुद्दीन : ------------ ( चचेरा भाई )
18) गांधीजी : राष्ट्रपिता :: अब्दुल कलाम :----- ( राष्ट्रपति )
19) कलाम का पक्का दोस्त : रामनंद शास्त्री :: कलाम के अंतरंग मित्र :----------- ( जलालुद्दीन )
20) नौकाएँ बनानेवालें : जलालुद्दीन :: अखबारोंको वितरण करनेवाले : --------- ( शम्सुद्दीन )
21) रामू : बेईमान :: बसंत : ( ईमानदार )
22) बसंत : अहीर टीला :: पंडित राजकिशोर : ---------- ( किशनगंज )
23) प्रताप : छोटा भाई :: बसंत : ----------- ( बडा भाई )
24) जीह : जीभ :: देहरी : -------- ( दहलीज )
25) दया : धर्म का मूल :: पाप : ---------- (अभिमान का मूल )
26) जीभ की तुलना : देहरी से :: राम नाम की तुलना : ----------- ( दीप से )
27) सूरदास : कृष्णभक्ति शाखा :: तुलसीदास :----- ( रामभक्ति शाखा )
28) हैकिंग : अभिशाप :: फेसबुक :------- ( वरदान )
29) हैकिंग : अभिशाप :: ई - गवर्नेस : --------- ( पारदर्शी प्रशासन )
30) वीडियो कान्फरेन्स : विचार विनिमय :: ई - गवर्नेस : --------- ( पारदर्शी प्रशासन )
31) कंप्यूटर : संगणक यंत्र :: इंटरनेट : -- ( अंतर्जाल )
32) मेरा बचपन : आत्मकथा : ईमानदारों के सम्मेलन में :------------ ( व्यंग्य रचना )
33) पहला दिन : चप्पलें गायब थी :: दूसरे दिन : ----------- ( धूप का चश्म )
34) मछली : तैरना :: साँप : ---------- ( रेंगना )
35) मकान की छत : मछली की पीठ जैसी :: मकान के स्तंभ : ---------- ( हाथी के पैर जैसे )
36) हाथी : जंगली जानवर :: भैंस : ------------- ( पालतू जानवर )
37) गिल्लू : रेखाचित्र :: रोबोट : --------- ( कहानी )
38) सक्सेना परिवार का रोबोट : रोबोनिल :: शर्मा परिवार का रोबोट : ---------- ( रोबोदीप )
39) सक्सेना परिवार का मालिक : धिरज सक्सेना :: रोबोट कंपनी का मालिक :------- ( रोबोजीत )
40) सक्सेना परिवार का मालिक : धिरज सक्सेना :: सक्सेना परिवार का नौकर : ----- ( साधोराम )
41) एवरेस्ट पर चढनेवाली पहली महिला : जुंके ताबी ::एवरेस्ट पर चढनेवाले पहले पुरुष:----(तेनजिंग नोर्गे)
42) कालानाग : पर्वत :: गंगोत्री : -------- ( ग्लेशियर )
43) कर्नल : खुल्लर :: मेजर : ---------- ( कुमार )
44) बलभद्र : बलराम :: कान्हा :-------- ( कृष्ण )

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

# ಬಾನಂಗಳದಿಂದ ಹಂಪಿ ದೇಗುಲಗಳ ವಿಹಂಗಮ ನೋಟ



ಹಂಪಿ ಬಾನಂಗಳದಲ್ಲಿ ಉಕ್ಕಿನ ಹಕ್ಕಿಗಳ ಹಾರಾಟ ಆರಂಭಗೊಂಡಿದ್ದು, ಶನಿವಾರ ಹಂಪಿ ಬೈ ಸ್ಕೈ ವಿಹಾರದಲ್ಲಿ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನ ವಿಹಂಗಮ ನೋಟ



ಹಂಪಿ ಉತ್ಸವ ಅಂಗವಾಗಿ ಶನಿವಾರ ಹಂಪಿ ಬೈ ಸ್ಕೈ ವಿಹಾರದಲ್ಲಿ ಶ್ರೀ ವಿಜಯ ವಿಠಲ ದೇವಸ್ಥಾನ, ಕಲ್ಲಿನ ರಥ, ಸಪ್ತಸ್ವರಗಳ ಮಂಟಪದ ವಿಹಂಗಮ ನೋಟ

## ರಥ ಬೀದಿಯಲ್ಲಿ ಅರಳಿದ ರಂಗೋಲಿ ರಂಗವಲ್ಲಿಗೆ ಮನಸೋತ ವಿದೇಶಿಗರು



■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವದ ಅಂಗವಾಗಿ ಶುಕ್ರವಾರ ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನದ ರಥ ಬೀದಿಯಲ್ಲಿ ಏರ್ಪಡಿಸಿದ ರಂಗೋಲಿ ಸ್ಪರ್ಧೆಯಲ್ಲಿ ಬಗೆ ಬಗೆಯ ರಂಗೋಲಿ ಚಿತ್ತಾರಗಳು ಮೂಡಿದವು. ಮಹಿಳೆ ಹಾಗೂ ಪುರಷರ ಅಭ್ಯರ್ಥಿಗಳು ಸೇರಿ ಒಟ್ಟು 47 ಜನ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ವತಿಯಿಂದ ಆಯೋಜಿಸಲಾದ ರಂಗೋಲಿ ಸ್ಪರ್ಧೆಗೆ ಜಿಲ್ಲಾ ಪಂಚಾಯತ್ ಉಪನಿರ್ದೇಶಕ ಭೀಮಪ್ಪ ಲಾಳಿ ಚಾಲನೆ ನೀಡಿದರು. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುಭದ್ರ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ರಂಗೋಲಿಯ ಚಿತ್ತಾರದಲ್ಲಿ ಶಿವಲಿಂಗ, ಕೃಷ್ಣ, ಎಲ್ಲಮ್ಮ ದೇವಿ, ಕಮಲ ಹೂಗಳು, ಮಹಿಳೆ ಮತ್ತು ನವಿಲು ಸೇರಿದಂತೆ ಬಗೆ-ಬಗೆಯ ಚಿತ್ತಾರಗಳ ಮೂಡಿದವು. ಸ್ವಾತಿ ಶಶಿಕಾಂತ ಬಿಡಿಸಿದ ರಂಗೋಲಿ ಪ್ರಥಮ ಸ್ಥಾನ ಪಡೆಯಿತು. ಶೃತಿಯವರ ರಂಗೋಲಿ ದ್ವಿತೀಯ ಹಾಗೂ ವೆಂಕಟೇಶ್ ಬಿಡಿಸಿದ ರಂಗೋಲಿ ತೃತೀಯ ಸ್ಥಾನ ಗಳಿಸಿತು.

**ರಂಗವಲ್ಲಿಗೆ ಮನಸೋತ ವಿದೇಶಿಗರು:** ಬಣ್ಣ ಬಣ್ಣದ ರಂಗೋಲಿಗಳು ಹಂಪಿ ವೀಕ್ಷಣೆಗೆ ಆಗಮಿಸಿದ ವಿದೇಶಿಗರು ಹಾಗೂ ಸಾರ್ವಜನಿಕರ ಗಮನವನ್ನು ಸೆಳೆದವು. ರಂಗವಲ್ಲಿಗೆ ಮನಸೋತ ವಿದೇಶಿಗರು ಪೋಟೋ ತೆಗೆದುಕೊಳ್ಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್ ದಿವಾಕರ, ಪಿಡಿಓ ಗಂಗಾಧರ ಚಿತ್ತಾಕರ್ಷಕ ರಂಗೋಲಿಗಳನ್ನು ವೀಕ್ಷಿಸಿದರು. ಈ ವೇಳೆ ಸ್ಪರ್ಧೆಯ ತೀರ್ಪುಗಾರರು ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

## ಟನಲ್ ಕಲ್ಪನೆಯಲ್ಲಿ ಮತ್ಸ್ಯ ಪ್ರದರ್ಶನ 95 ವಿವಿಧ ಅಲಂಕಾರಿಕ ಮೀನುಗಳು

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಶ್ವವಿಖ್ಯಾತ ಹಂಪಿ ಉತ್ಸವದಲ್ಲಿ ಮೀನುಗಾರಿಕೆ ಇಲಾಖೆಯಿಂದ ಆಕರ್ಷಣೀಯ ಮತ್ಸ್ಯ ಮೇಳ ಪ್ರದರ್ಶನಕ್ಕೆ ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಉದ್ಘಾಟಿಸಿದರು.

ಹಂಪಿಯ ಮಾತಂಗ ಪರ್ವತ ಮೈದಾನದಲ್ಲಿ ಮೀನುಗಾರಿಕೆ ಇಲಾಖೆಯಿಂದ ಏರ್ಪಡಿಸಿದ್ದ ಮತ್ಸ್ಯ ಮೇಳ ವಿಶೇಷವಾಗಿ ಇಲಾಖೆಯ ಯೋಜನೆಗಳು ಮತ್ತು ಸೌಲಭ್ಯಗಳ ಮಾಹಿತಿಯನ್ನು ಸಾರುವಂತಿತ್ತು. ಈವರೆಗೂ ನೋಡಲು ಸಾಧ್ಯವಾಗದ ಅಪರೂಪದ ಸುಮಾರು 95 ಪ್ರಬೇಧದ ಅಲಕಾಂರಿಕ ಮೀನುಗಳು, ಬಣ್ಣ ಬಣ್ಣದ ಅಲಂಕಾರಿಕ ಮೀನುಗಳು ಸೇರಿದಂತೆ ಟನಲ್ ಕಲ್ಪನೆಯಲ್ಲಿ ಮತ್ಸ್ಯ ಪ್ರದರ್ಶನ ಆಕರ್ಷಣೀಯವಾಗಿತ್ತು. ಕಡಲತೀರದಲ್ಲಿ ಮತ್ಸ್ಯ ಕನ್ಯೆ ದರ್ಶನವಾಗಿರುವಂತೆ, ಕಡಲೊಳಗೆ ಮುತ್ತಿನ ಚಿಪ್ಪು ತೆರೆದು ಮುತ್ತು ಕಾಣಿಸುವಂತೆ ಪ್ರಾತಿಕ್ಷಿತೆಗಳನ್ನು ನೋಡುಗರ ಗಮನ ಸೆಳೆದವು. ಅಪರೂಪದ ಮೀನುಗಳ ಪ್ರದರ್ಶನ ಮೇಳದಲ್ಲಿ ಬಣ್ಣದ ಅಲಂಕಾರಿಕ ಮೀನುಗಳನ್ನು ಒಳಗೊಂಡ 40 ಕ್ಕೂ ಹೆಚ್ಚು ಅಕ್ವೇರಿಯಂಗಳನ್ನು ಪ್ರದರ್ಶನದಲ್ಲಿರಿಸಲಾಗಿತ್ತು. ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕ ಬಿ.ಮಲ್ಲೇಶ್, ಮತ್ಸ್ಯ ಮೇಳದ ಆಯೋಜಕ ಶೋಯಬ್ ಖಾನ್, ಇಲಾಖೆಯ ಶಾಂತಕುಮಾರ್, ರಜನೀಶ್, ಮಂಜುನಾಥ ನೋಡಗರಿಗೆ ಮಾಹಿತಿ ತಿಳಿಪಡಿಸಿದರು. ಶಾಸಕ ಹೆಚ್.ಆರ್. ಗವಿಯಪ್ಪ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಒ ಎನ್.ಎಂ. ಅಕ್ರಮ್ ಅಲಿ ಷಾ, ಎಸ್ಪಿ ಶ್ರೀಹರಿಬಾಬು.ಬಿ.ಎಲ್ ಇದ್ದರು.



## ರಂಗದ ಮೇಲೆ ವಿಜಯನಗರ ವೈಭವ ಮರುಸೃಷ್ಠಿ ಮಂತ್ರಮುಗ್ಧಗೊಳಿಸಿದ ಧ್ವನಿ ಬೆಳಕು



■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವದ ಅಂಗವಾಗಿ ಹಂಪಿಯ ಕುದುರೆ ಹಾಗೂ ಆನೆಲಾಯಾ ಆವರಣದಲ್ಲಿ ಉತ್ಸವದ ಮೊದಲ ದಿನ ಶುಕ್ರವಾರ ಪ್ರಸ್ತುತ ಪಡಿಸಿದ ಧ್ವನಿ ಬೆಳಕು ಕಾರ್ಯಕ್ರಮ ರಂಗದ ಮೇಲೆ ವಿಜಯನಗರ ವೈಭವನ್ನು ಮರುಸೃಷ್ಠಿಸಿತು. ನೋಡುಗರನ್ನು ಮಂತ್ರಮುಗ್ಧಗೊಳಿಸಿತು.

ಕೇಂದ್ರ ವಾರ್ತಾ ಮತ್ತು ಪ್ರಚಾರ ಸಚಿವಾಲಯದ ಸಂವಹನ ಇಲಾಖೆ, ಕೇಂದ್ರ ಪುರತತ್ವ ಇಲಾಖೆ, ರಾಜ್ಯ ಪ್ರವಾಸೋದ್ಯಮ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯನಗರ ಜಿಲ್ಲಾಡಳಿತ ಸಹಯೋಗದಲ್ಲಿ ಹಂಪಿಉತ್ಸವದ ಅಂಗವಾಗಿ ಆಯೋಜಿಸಲಾದ ಧ್ವನಿ ಬೆಳಕು ಕಾರ್ಯಕ್ರಮಕ್ಕೆ ಗ್ರಾಯಿತ್ರಿ ಪೀಠದ ಬಳಿಯ ಎಂ.ಪಿ.ಪ್ರಕಾಶ್ ಪ್ರಧಾನ ವೇದಿಕೆಯಲ್ಲಿ ಉದ್ಘಾಟಿಸಲಾಯಿತು. ನಂತರ ಸಾಂಕೇತಿಕವಾಗಿ ರಂಗದ ಮೇಲೆ ಉದ್ಘಾಟಿಸಿ ರಂಗಪ್ರಯೋಗ ಪ್ರಸ್ತುತ ಪಡಿಸಲಾಯಿತು.

ಸುಮಾರು 2 ಗಂಟೆಗಳಲ್ಲಿ ವಿಜಯನಗರ ಸ್ಥಾಪನೆ, ಪ್ರವರ್ಧಮಾನ, ಕೃಷ್ಣದೇವರಾಯನ ಕಾಲದ ಸುವರ್ಣ ಯುಗ ಹಾಗೂ ವಿಜಯನಗರ ಪತನದ ಕಥೆಯನ್ನು ಸುಮಾರು 110 ಕಲಾವಿದರು, ಕಂಚಿನ ಹಿನ್ನಲೆ ಧ್ವನಿ, ವಿವಿಧ ಬಣ್ಣಗಳ ಬೆಳಕು, ಮಧುರ ಸಂಗೀತದೊಂದಿಗೆ ಪ್ರಸ್ತುತ ಪಡಿಸಿದರು.

ಖ್ಯಾತ ನಟರ ಹಿನ್ನಲೆ ಧ್ವನಿ: ಧ್ವನಿ ಬೆಳಕು ರಂಗಪ್ರಯೋಗಕ್ಕೆ ಖ್ಯಾತ ನಟರಾದ ವಿಷ್ಣುವರ್ಧನ, ಭಾರತಿ ವಿಷ್ಣುವರ್ಧನ್, ಶ್ರೀನಾಥ್, ಸಿ.ಆರ್.ಸಿಂಹ, ಶ್ರೀನಿವಾಸ ಮೂರ್ತಿ, ರಾಮಕೃಷ್ಣ, ಉಮಾಶ್ರೀ, ಶೃತಿ ಸೇರಿದಂತೆ ಖ್ಯಾತ ನಟ ನಟಿಯರು ಧ್ವನಿ ನೀಡಿದ್ದಾರೆ. ಇದರೊಂದಿಗೆ ಶಾಸ್ತ್ರೀಯ ನೃತ್ಯ ಸಂಯೋಜನೆ, ದಿ.ಸೂರ್ಯನಾಥ್ ಕಾಮತ್ ಹಾಗೂ ದಿ.ಸಿ.ಅಶ್ವಥ ಅವರ ಸಂಗೀತ ಧ್ವನಿಬೆಳಕು ಕಾರ್ಯಕ್ರಮದ ಮೆರುಗು ಹೆಚ್ಚಿಸಿದೆ.

ಕಾರ್ಯಕ್ರಮದಲ್ಲಿ ಪಿಐಬಿ ಸಂವಹನ ಇಲಾಖೆ ನಿರ್ದೇಶಕ ಡಾ.ಜಿತೇಂದ್ರ ಪಾಟೀಲ್, ಉಪನಿರ್ದೇಶಕ ಜೈಕುಮಾರ್, ಹುಡಾ ಆಯುಕ್ತ ಎಲ್.ಡಿ.ಜೋಶಿ, ನೃತ್ಯ ಸಂಯೋಜನಕಿ ಡಾ.ಶೀಲಾ ಶ್ರೀಧರ್ ಸೇರಿದಂತೆ ತಂತ್ರಜ್ಞರು ಹಾಗೂ ಸಿಬ್ಬಂದಿ ಇದ್ದರು.

## ಎತ್ತುಗಳ ಪ್ರದರ್ಶನಕ್ಕೆ ಸಚಿವ ಜಮೀರ್ ಅಹ್ಮದ್ ಖಾನ್ ಚಾಲನೆ

# ಹಳ್ಳಿಕಾರ ತಳಿ ಚಾಂಪಿಯನ್



■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವದ ಅಂಗವಾಗಿ ಜಿಲ್ಲಾಡಳಿತ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಕಮಲಾಪುರದ ಹಂಪಿ ವಿಶ್ವ ಪಾರಂಪರಿಕ ತಾಣ ನಿರ್ವಹಣಾ ಪ್ರಾಧಿಕಾರದ (ಹವಾಮಾ) ಕಚೇರಿ ಹಿಂಭಾಗದಲ್ಲಿ ಶುಕ್ರವಾರ ಆಯೋಜಿಸಿದ್ದ ಏರ್ಪಡಿಸಿದ್ದ ಎತ್ತುಗಳ ಪ್ರದರ್ಶನ ಸಾರ್ವಜನಿಕರ ಗಮನ ಸೆಳೆಯಿತು.

ಎತ್ತಿಗೆ ಪೂಜೆ ಸಲ್ಲಿಸಿ, ಹಣೆಗೆ ಮುತ್ತಿಕ್ಕುವ ಮೂಲಕ ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಪ್ರದರ್ಶನ ಉದ್ಘಾಟಿಸಿದರು. ಉತ್ತಮ ಎತ್ತುಗಳಿಗೆ ಬಹುಮಾನವಿದ್ದು, ವಿಶೇಷವಾಗಿ ಈ ಬಾರಿ ಭಾಗವಹಿಸಿದ ಎಲ್ಲಾ ಜೋಡು ಎತ್ತುಗಳಿಗೆ ವೈಯಕ್ತಿಕವಾಗಿ ಪ್ರೋತ್ಸಾಹಧನ ಮತ್ತು ಚಾಂಪಿಯನ್ ಆಫ್ ಚಾಂಪಿಯನ್ ವಿಜೇತ ಜೋಡಿ ಎತ್ತುಗಳಿಗೆ ರೂ.50 ಸಾವಿರ ಬಹುಮಾನ ಘೋಷಿಸಿ ನೀಡಿದರು. ಸ್ಪರ್ಧೆ 25 ಕ್ಕೂ ಹೆಚ್ಚು ಜೋಡಿ ಎತ್ತುಗಳು ಭಾಗವಹಿಸಿದ್ದವು. ಓಂಗೋಲ್, ಅಮೃತ ಮಹಲ್, ಕಿಲಾರಿ ಜಾತಿ ಜೋಡಿ ಎತ್ತುಗಳು ಸೇರಿದಂತೆ ಉಳಿದ ಜೋಡಿಗಳೆಲ್ಲವು ಹಳ್ಳಿಕಾರ ತಳಿಗೆ ಸೇರಿದ್ದವು. ಪ್ರದರ್ಶನದಲ್ಲಿ ಎತ್ತುಗಳ ಮೂಲತಳಿ, ದೇಹದಾರ್ಢ್ಯತೆ, ಚುರುಕುತನ, ಅವುಗಳ ಚರ್ಮ ಸ್ಪರ್ಶಿಸುವ ಮೂಲಕ ವಯಸ್ಸು, ಹಲ್ಲು ಸೇರಿದಂತೆ ಸಮರ್ಥನೆಗೆ ಒಳಪಡಿಸಿದ ಬಳಿಕ ತೀರ್ಪುಗಾರರು ಅವುಗಳ ಚಲನವಲನಗಳ ಪರಿಶೀಲಿಸಿ ಬಹುಮಾನ ಘೋಷಿಸಿದರು. ಹೊಸಪೇಟೆ ರೈತ ಸುಲೇಮಾನ್.ಎ ಅವರ ಹಳ್ಳಿಕಾರ ತಳಿಗೆ ಸೇರಿದ ಜೋಡು ಎತ್ತುಗಳು ಪ್ರಥಮ ಸ್ಥಾನ ಪಡೆದುಕೊಂಡು, ರೂ.10,000 ಹಾಗೂ ಪ್ರಮಾಣ ಪತ್ರ ಪಡೆದು ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡವು. ಕಮಲಾಪುರ ಪಟ್ಟಣದ 19 ನೇ ವಾರ್ಡ್ ನ ರೈತ ಕೆ.ಸಿದ್ದಪ್ಪ ಅವರ ಎತ್ತುಗಳು ರೂ.7,500 ಹಾಗೂ ಪ್ರಮಾಣ ಪತ್ರ ಒಳಗೊಂಡು ದ್ವಿತೀಯ ಸ್ಥಾನ ಪಡೆದುಕೊಂಡವು. ಇನ್ನೋರ್ವ ಕಮಲಾಪುರದ ರೈತ ಪೂಜಾರಿ ಜೋಗಯ್ಯ ಅವರ ಎತ್ತುಗಳು ತೃತೀಯ ಸ್ಥಾನ ಪಡೆದು, ರೂ.5000 ಹಾಗೂ ಪ್ರಮಾಣ ಪತ್ರ ಗಿಟ್ಟಿಸಿಕೊಂಡವು. ತೀರ್ಪುಗಾರರಾಗಿ ಶಿವಮೊಗ್ಗ ಪಶು ವೈದ್ಯಕೀಯ ವಿಶ್ವವಿದ್ಯಾಲಯದ ಡಾ.ಸತೀಶ್ ಮತ್ತು ಡಾ.ವೀರಣ್ಣನವರ್ ಅವರು ಭಾಗವಹಿಸಿದ್ದರು.

**ಪ್ರತಿ ಜೋಡೆತ್ತುಗಳಿಗೆ ವೈಯಕ್ತಿಕ 10 ಸಾವಿರ ರೂ. ಬಹುಮಾನ:** ಹಂಪಿ ಉತ್ಸವದ ಎತ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದ ಎಲ್ಲಾ ಜೋಡು ಎತ್ತುಗಳಿಗೆ ತಲಾ 10 ಸಾವಿರ ರೂ. ದಂತೆ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಹಾಗೂ ಶಾಸಕ ಹೆಚ್.ಆರ್. ಗವಿಯಪ್ಪ ಅವರು ವೈಯಕ್ತಿಕವಾಗಿ 2.50 ಲಕ್ಷ ರೂ. ನೀಡಿದರು. ಸಚಿವರ ವೈಯಕ್ತಿಕವಾಗಿ ನೀಡಿದ ಪ್ರೋತ್ಸಾಹಧನದಂತೆ, ಹೊಸಪೇಟೆಯ ರೈತ ಮಂಜುನಾಥ.ಆರ್.ಕೆ ಅವರ ಹಳ್ಳಿಕಾರ ತಳಿಯ ಜೋಡಿ ಎತ್ತುಗಳಿಗೆ ಚಾಂಪಿಯನ್ ಆಫ್ ಚಾಂಪಿಯನ್ ವಿಜೇತವಾಗಿ 50 ಸಾವಿರ ರೂ. ಬಹುಮಾನ ನೀಡಲಾಯಿತು.

**ಮಲೆನಾಡು ಗಿಡ್ಡ (ಡಿಂಗ್ರಿ) ಪ್ರಮುಖ ಆಕರ್ಷಣೆ:** ಎತ್ತುಗಳ ಪ್ರದರ್ಶನದಲ್ಲಿ ಅಂದಾಜು 4 ಅಡಿ ಎತ್ತರದ 2 ವರ್ಷ ಪ್ರಾಯದ ಮಲ್ನಾಡ್ ಗಿಡ್ಡ ಅಲಿಯಾಸ್ ಡಿಂಗ್ರಿ ಎಂಬ ವಿಶೇಷ ತಳಿಯ ಹೋರಿಯು ಪ್ರಮುಖ ಆಕರ್ಷಣೆಯಾಗಿ ಕಂಡುಬಂತು. ಮಲಪನಗುಡಿ ಗ್ರಾಮದವನಾದ ಮಲ್ನಾಡ್ ಗಿಡ್ಡನಿಗೆ ಬಿಸ್ಕೆಟ್ ಎಂದರೆ ಬಲುಪ್ರಿಯವಂತೆ, ಈ ವಿಶೇಷ ತಳಿಯು ಕರ್ನಾಟಕದ ಮಲೆನಾಡು ಭಾಗ ಹಾಗೂ ಆಂಧ್ರಪ್ರದೇಶ ರಾಜ್ಯದಲ್ಲಿ ಹೆಚ್ಚಾಗಿ ಕಂಡುಬರುತ್ತದೆ ಎಂದು ಹೇಳುತ್ತಾರೆ ಮಾಲೀಕರಾದ ಹೊಸಪೇಟೆಯ ಗುರುಪ್ರಸಾದ್ ಪ್ರದರ್ಶನದಲ್ಲಿ ರೈತರು ತಮ್ಮ ಎತ್ತುಗಳಿಗೆ ಗಂಡೆವು, ಅಲಂಕೃತ ಹೂ ಗಳಿಂದ ಸಿಂಗರಿಸಿದ್ದರು.

ಈ ವೇಳೆ ಶಾಸಕ ಎಚ್.ಆರ್.ಗವಿಯಪ್ಪ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ಪಶುಸೇವೆ ಮತ್ತು ಪಶು ವೈದ್ಯಕೀಯ ಇಲಾಖೆಯ ಉಪನಿರ್ದೇಶಕ ಡಾ.ಪೋವರ್ ಸಿಂಗ್ ನಾಯಕ, ಸಹಾಯಕ ನಿರ್ದೇಶಕ ಅಕ್ತರ್.ಹೆಚ್.ಎಂ.ಎಸ್ ಸೇರಿದಂತೆ ಇಲಾಖೆಯ ಸಿಬ್ಬಂದಿ ವರ್ಗದವರು, ರೈತರು, ಸಾರ್ವಜನಿಕರು ಹಾಗೂ ಇತರರು ಇದ್ದರು.

# ಕಾವ್ಯದ ತೊಟ್ಟಿಲು ಗ್ರಾಮೀಣ ಮಹಿಳೆ

### ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಸಾಹಿತಿ ಕುಂ. ವೀರಭದ್ರಪ್ಪ ಅಭಿಮತ



■ **ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಕಾವ್ಯದ ತೊಟ್ಟಿಲು ಗ್ರಾಮೀಣ ಮಹಿಳೆಯಾಗಿದ್ದು, ಅವರನ್ನು ಗೌರವಿಸುವ ಕೆಲಸ ನಾವು ಮಾಡಬೇಕಿದೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಸಾಹಿತಿ ಕುಂ. ವೀರಭದ್ರಪ್ಪ ಹೇಳಿದರು.

ಶುಕ್ರವಾರ ಹಂಪಿ ಉತ್ಸವ– 2025 ರ ಅಂಗವಾಗಿ ಶ್ರೀ ವಿರೂಪಾಕ್ಷೇಶ್ವರ ದೇವಾಲಯ ವೇದಿಕೆಯಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಕವಿಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮಹಿಳಾ ಕವಿಗೋಷ್ಠಿ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿರುವುದಕ್ಕೆ ನನಗೆ ತುಂಭಾ ಸಂತೋಷ ವಾಗುತ್ತಿದೆ. ಎಲ್ಲಾ ಮೂಢ ನಂಬಿಕೆಗಳನ್ನು ತುಳಿಯುವ ಶಕ್ತಿ ನಮ್ಮ ಕನ್ನಡ ಕಾವ್ಯಕ್ಕಿದೆ. ಕಲ್ಲು ಕೊಟ್ಟವರಿಗೂ ಎಲ್ಲಾ ಭಾಗ್ಯವು ಬರಲಿ ಎಂದು ಹಾರೈಸಿದವರು ಕನ್ನಡದ ಮಹಿಳೆಯರು. ಇದು ನಮ್ಮ ನಾಡಿನ ಹೆಣ್ಣು ಮಕ್ಕಳ ಉದಾತ್ತ ಚಿಂತನೆಗೆ ಉದಾಹರಣೆಯಾಗಿದೆ.



ವರ್ತಮಾನದ ಕಾವ್ಯ ಹಾಗೂ ಚಿಂತನೆಗಳಲ್ಲಿ ಕಡು ಬಡುತನದ ಯಾರು ಬರೆಯುತ್ತಿಲ್ಲ. ಕನ್ನಡ ಭಾಷೆಯ ಬಳಕೆ ಕಡಿಮೆಯಾಗಿದೆ. ಭಾಷೆ ಜೀವಂತವಾಗಿ ಇರಬೇಕಾದರೆ ಮಕ್ಕಳಿಗೆ ಹೆಚ್ಚಾಗಿ ಕನ್ನಡ ಭಾಷೆಯಲ್ಲಿ ಮಾತನಾಡುವ ವಾತಾವರಣ ಶಾಲೆಗಳಲ್ಲಿ ಕಲ್ಪಿಸಬೇಕಿದೆ ಎಂದು ಅಭಿಪ್ರಾಯಪಟ್ಟರು.

ಹೆಣ್ಣು ಇಲ್ಲದ ಕುಟುಂಬ ಅಪರಿಪೂರ್ಣ. ಹೆಣ್ಣಿಗಿಂತ ದೊಡ್ಡದು ಯಾವುದು ಇಲ್ಲ. ಕುಟುಂಬದಲ್ಲಿ ಹೆಣ್ಣೇ ಕಣ್ಣು. ಹೆಣ್ಣುಮಕ್ಕಳು ಇದ್ದರೆ ತಂದೆ – ತಾಯಿಗಳನ್ನು ಅನಾಥಾಶ್ರಮಕ್ಕೆ ಸೇರಿಸುವದಿಲ್ಲ. ಹೆಣ್ಣಿನದು ತಾಯಿ ಹೃದಯ ಸ್ವಾತಂತ್ರ್ಯ ಪೂರ್ವದಲ್ಲಿ ಒಲ್ಲದ ಗಂಡನ ಜೊತೆಗೆ ಜೀವನ ಮಾಡಿದ ಮಹಿಳೆ, ಗಂಡ ಕೆಟ್ಟವನಾಗಿರಲಿ, ಕುಡುಕನಾಗಿರಲಿ ಎಲ್ಲವನ್ನೂ ಸಹಿಸಿಕೊಂಡು ಅವನ ಜೊತೆ ಕುಟುಂಬ ಮುನ್ನಡೆಸಿಕೊಂಡು ಹೋದಳು. ತಾಳ್ಮೆಯ ಸಹನೆ ನಮ್ಮ ಹೆಣ್ಣುಮಕ್ಕಳ ಗುಣವಾಗಿದೆ. ಈ ಮಹಿಳಾ ಕವಿಗೋಷ್ಠಿಯಲ್ಲಿ 42 ಕವಯಿತ್ರಿಯರ ಕವನಗಳನ್ನು ಕೇಳುತ್ತಿರುವುದು ನನಗೆ ತುಂಭಾ ಸಂತೋಷ ವಾಗುತ್ತಿದೆ. ನನ್ನ ಸಾಹಿತ್ಯ ಚಿಂತನೆ ಹಾಗೂ ಭಾಷೆಯ ಸೃಷ್ಟಿಗೆ ಬಳ್ಳಾರಿ ನೆಲ ಕಾರಣ. ನನ್ನ ಕಥೆ ಕಾದಂಬರಿಗಳಲ್ಲಿ ಮಹಿಳಾ ಧ್ವನಿಗಳನ್ನು ಸಶಕ್ತವಾಗಿ ಅಭಿವ್ಯಕ್ತಿಸಿದ್ದೇನೆ. ಕವಿಗೆ ಸ್ತ್ರೀ ತನ ಇಲ್ಲದಿದ್ದರೆ ಒಳ್ಳೆಯ ಲೇಖಕನಾಗಲು ಸಾಧ್ಯವಿಲ್ಲ ಎಂದರು.

ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ಮಾತನಾಡಿ, ಮಹಿಳಾ ಕವಿಗೋಷ್ಠಿಯಲ್ಲಿ ಚಿಂತನೆಗಳು ಹೊರ ಬರಲಿ ಎಂದರು.

ವಿಮರ್ಶಕರಾದ ಡಾ. ಸೋಮಕ್ಕ ಎಂ. ಅವರು ಆಶಯ ನುಡಿಗಳಾಡಿದರು. ಅಂಕಣ ಬರಹಗಾರರಾದ ಶ್ರೀದೇವಿ ಕೆರೆಮನೆ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ಕಸಾಪ ಅಖಂಡ ಬಳ್ಳಾರಿ ಜಿಲ್ಲಾಧ್ಯಕ್ಷ ಡಾ. ನಿಷ್ಠಿ ರುದ್ರಪ್ಪ. ಹೊಸಪೇಟೆ ತಾಲ್ಲೂಕು ಕಸಾಪ ಅಧ್ಯಕ್ಷ ಡಾ. ಗುಂಡಿ ಮಾರುತಿ. ಸಾಹಿತಿ ಡಾ. ದಯಾನಂದ ಕಿನ್ನಾಳ. ಶಾಲಾ– ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ವೆಂಕಟೇಶ್ ರಾಮಚಂದ್ರಪ್ಪ. ಪ್ರಾಚಾರ್ಯರಾದ ನಾಗರಾಜ್ ಹವಾಲ್ದಾರ್. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶ್ವೇತಾ. ಸಿಂಧು ಎಲಿಗಾರ್, ಸುಭದ್ರಾ ಸೇರಿದಂತೆ. ಕವಿ. ಕವಯಿತ್ರಿಯರು ಭಾಗವಹಿಸಿದ್ದರು.